SCCH – 01
MVC No.6405/2025
PW2

**ಮುಖ್ಯ ನ್ಯಾಯಾಧೀಶರು, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

**ಎಂ.ವಿ.ಸಿ. ಸಂಖ್ಯೆ: 6405/2025**

PW2

| | |
|---|---|
| ಹೆಸರು | ಸಿದ್ದೇಶ್ |
| ತಂದೆಯ ಹೆಸರು | ಬಸವಲಿಂಗಯ್ಯ |
| ವಯಸ್ಸು | **64** ವರ್ಷ |
| ವೃತ್ತಿ | ದಯಾನಂದ ಸಾಗರ್ ಆಸ್ಪತ್ರೆಯಲ್ಲಿ ಮೆಡಿಕಲ್ ರೆಕಾರ್ಡ್ ಆಫೀಸರ್ |
| ವಿಳಾಸ | ಹಾರೋಹಳ್ಳಿ, ಕನಕಪುರ ರಸ್ತೆ |

**ದಿನಾಂಕ: 10.08.2026 ರಂದು ಅರ್ಜಿದಾರರ ಪರ ಸಾಕ್ಷಿಯಾಗಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿರುತ್ತೇನೆ. ನ್ಯಾಯಾಲಯದ ಸಮನ್ಸ್ ಮೇರೆಗೆ ಹಾಜರಾಗಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಕ್ಕೆ ಬದಲಾಗಿ, ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ.

2) ನನಗೆ ದಯಾನಂದ ಸಾಗರ್ ಆಸ್ಪತ್ರೆಯಿಂದ ನೀಡಿರುವ ಅಧಿಕಾರ ಪತ್ರವನ್ನು ನಿ.ಪಿ.**16** ಎಂದು ಗುರುತಿಸಿದ್ದೇನೆ.

3) ಈ ಪ್ರಕರಣಕ್ಕೆ ಸಂಬಂಧಿಸಿದ ಎಂ.ಎಲ್.ಸಿ ಎಕ್ಸ್ ಟ್ರ್ಯಾಕ್ಟ್ ನ ಯಥಾ ನಕಲನ್ನು ನಿ.ಪಿ.**17** ಎಂದು ಗುರುತಿಸಿದ್ದೇನೆ. (ಸಾಕ್ಷಿಯು ಎಂ.ಎಲ್.ಸಿ ರಿಜಿಸ್ಟರ್ ಅನ್ನು ಹಾಜರುಪಡಿಸಿದ್ದು ಅದನ್ನು ಯಥಾ ನಕಲಿನೊಂದಿಗೆ ಹೋಲಿಸಿದ ನಂತರ ಸಾಕ್ಷಿಗೆ ಹಿಂತಿರುಗಿಸಲಾಗಿದೆ).

4) ಅಪಘಾತದ ಬಗ್ಗೆ ನಮ್ಮ ಆಸ್ಪತ್ರೆಯಿಂದ ಪೋಲಿಸರಿಗೆ ನೀಡಿದ ಇಂಟಿಮೇಷನ್ ಯಥಾ ನಕಲನ್ನು ನಿ.ಪಿ.**18** ಎಂದು ಗುರುತಿಸಿದ್ದೇನೆ. (ಸಾಕ್ಷಿಯು ಪೋಲಿಸರಿಗೆ ನೀಡುವ ಇಂಟಿಮೇಷನ್ ರಿಜಿಸ್ಟರ್ ಅನ್ನು ಹಾಜರುಪಡಿಸಿದ್ದು ಅದನ್ನು ಯಥಾ ನಕಲಿನೊಂದಿಗೆ ಹೋಲಿಸಿದ ನಂತರ ಸಾಕ್ಷಿಗೆ ಹಿಂತಿರುಗಿಸಲಾಗಿದೆ).

5) ಎರಡು ಕೇಸ್ ಶೀಟ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.**19** ಮತ್ತು ನಿ.ಪಿ.**20** ಎಂದು ಗುರುತಿಸಿದ್ದೇನೆ.

6) **23** ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**21** ಎಂದು, ಮತ್ತು ಐದು ಸಿ.ಟಿ.ಸ್ಕ್ಯಾನ್ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**22** ಎಂದು ಗುರುತಿಸಿದ್ದೇನೆ.

**<u>ಪಾಟೀ ಸವಾಲು: 1 ನೇ ಎದುರುದಾರ / ವಿಮಾ ಕಂಪೆನಿ ಪರ ವಕೀಲರಿಂದಃ</u>**

1) ಅಪಘಾತಕ್ಕೆ ಸಂಬಂಧಿಸಿದಂತೆ ನಮ್ಮ ಆಸ್ಪತ್ರೆಯಲ್ಲಿ ಮೆಡಿಕೋ ಲೀಗಲ್ ಕೇಸ್ ದಾಖಲಾಗಿದೆ. ನಾನು ಹಾಜರುಪಡಿಸಿದ ದಾಖಲೆಗಳ ಒಕ್ಕಣೆಗಳು ನನಗೆ ಗೊತ್ತಿಲ್ಲ. ನಾನು ಕೇವಲ ದಾಖಲೆಗಳನ್ನು ಹಾಜರುಪಡಿಸಲು ಬಂದಿದ್ದೇನೆ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರು ನಮ್ಮಲ್ಲಿಯೇ ಇದ್ದಾರೆ. ಈ ಕೇಸಿನ ಮಾಹಿತಿ ಅವರಿಗೆ ಮಾತ್ರ ಗೊತ್ತಿದೆ ಎಂದರೆ ಸರಿ.

**<u>ಪಾಟೀ ಸವಾಲು: 2 ನೇ ಎದುರುದಾರರು ಎಕ್ಸ್ ಪಾರ್ಟೆ ಇದ್ದಾರೆ.</u>**

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.